ದೋಸ್ತಿಗಳ ಹೈಡ್ರಾಮಾ : ವಿಶ್ವಾಸಮತ ಮತ್ತೆ ಮುಂದಕ್ಕೆ

# ಹೊಸ ಡೆಡ್‌ಲೈನ್

ವಿಕ ಸುದ್ದಿಲೋಕ ಬೆಂಗಳೂರು

ದೋಸ್ತಿ ಸರಕಾರದ ವಿಶ್ವಾಸಮತ ಯಾಚನೆ ಕಗ್ಗಂಟಿನ ಹಾದಿ ಹಿಡಿದಿದ್ದು, ಸೋಮವಾರ ಹಲವು ಹೈಡ್ರಾಮಾಗಳ ನಡುವೆ ಕಲಾಪವನ್ನು ಮಂಗಳವಾರ ಬೆಳಗ್ಗೆ 10 ಗಂಟೆಗೆ ಮುಂದೂಡಲಾಯಿತು. ಸಂಜೆ 6 ಗಂಟೆಯೊಳಗೆ ವಿಶ್ವಾಸಮತ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಸ್ಪೀಕರ್ ತಾಕೀತು ಮಾಡಿದರು.

"ವಿಶ್ವಾಸಮತ ಯಾಚನೆ ಪ್ರಕ್ರಿಯೆಗೆ ಸೋಮವಾರ ಅಂತ್ಯ ಹಾಡಲಾಗುವುದು," ಎಂದು ಸ್ವತಃ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ಅವರೇ ಶುಕ್ರವಾರ ಘೋಷಿಸಿದ್ದರು. ಇದಕ್ಕೆ ಬಾಧ್ಯಸ್ಥರಾಗಿರುವುದಾಗಿ ಸಿಎಂ ಕುಮಾರಸ್ವಾಮಿ ಹಾಗೂ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಒಪ್ಪಿಕೊಂಡಿದ್ದರು. ಈ ನಡುವೆಯೂ ಸೋಮವಾರದ ಕಲಾಪದಲ್ಲಿ ತಡ ರಾತ್ರಿಯವರೆಗೆ ನಡೆದು ಸದನ ಮುಂದೂಡಿಕೆಗೆ ದೋಸ್ತಿಗಳು ಹರಸಾಹಸ ನಡೆಸಿದರು. ಅಂತಿಮವಾಗಿ ರಾತ್ರಿ 11.50ಕ್ಕೆ ಕಲಾಪವನ್ನು ಮುಂದೂಡಲಾಯಿತು.

ಬೆಳಗಿನ ಕಲಾಪದಲ್ಲಿ ಸಚಿವ ಕೃಷ್ಣ ಬೈರೇಗೌಡ, ಹಲವು ಹಲವು ಕಾನೂನು ವಿಚಾರ ಪ್ರಸ್ತಾಪಿಸಿದರು. ಆಡಳಿತ ಪಕ್ಷದ ಶಾಸಕರು ಇದನ್ನೇ ಸಮರ್ಥಿಸಿ ವಿಶ್ವಾಸಮತ ಯಾಚನೆಯನ್ನೇ ಮುಂದೂಡುವಂತೆ ಪಟ್ಟು ಹಿಡಿದರು. ಭೋಜನದ ಬಳಿಕ ಆಡಳಿತ ಪಕ್ಷಗಳ ಕಡೆಯಿಂದ ಮಾತನಾಡಿದ ಹಲವು ಶಾಸಕರು ಕಾಲಹರಣ ಮಾಡಲು ತಮ್ಮದಾದ ಕೊಡುಗೆ ಸಲ್ಲಿಸಿದರು. >>02



ಯಡಿಯೂರಪ್ಪ ಮಾತಿನ ಅಬ್ಬರ...



ಚಿಂತಾಕ್ರಾಂತ ಸಿಎಂ ಕುಮಾರಸ್ವಾಮಿ.

## ಇಂದು ಏನೇನು?

1ರಿಂದ 4 ಗಂಟೆವರೆಗೆ ...

4ರಿಂದ 5 ಸ್ಪೀಕರ್ ... ಉತ್ತರ

6ರಿಂದ 6 ... ಮತದಾನ ...

## ಮಿಡ್‌ನೈಟ್ ಗೇಮ್

- ಸೋಮವಾರ ಮಧ್ಯರಾತ್ರಿ 11.50ರವರೆಗೆ ನಡೆದ ಕಲಾಪ, ಆಡಳಿತ ಪಕ್ಷ ಸದಸ್ಯರ ಮಾತಿನ ಸುರಿಮಳೆ!
- ಕಲಾಪ ಮುಂದೂಡಲು ದೇಶಪಾಂಡೆ, ಸಿದ್ದರಾಮಯ್ಯ ಮನವಿ
- ಸಾಧ್ಯವೇ ಇಲ್ಲ, ಇಂದೇ ತೀರ್ಮಾನವಾಗಲಿ ಎಂದ ಬಿಜೆಪಿ
- ನಾನು ಹೇಗೆ ಜನರಿಗೆ ಮುಖ ತೋರಿಸಲಿ? ಮಂಗಳವಾರ 4 ಗಂಟೆಯೊಳಗೆ ಪ್ರಕ್ರಿಯೆ ಮುಗಿಸಲೇಬೇಕೆಂದ ಸ್ಪೀಕರ್
- ಸಂಜೆ 6 ಗಂಟೆಯೊಳಗೆ ಮುಗಿಸೋಣ ಎಂದ ಸಿದ್ದರಾಮಯ್ಯ
- ಸರಿ, ಮಂಗಳವಾರ ಸಂಜೆ 6 ಗಂಟೆಯೊಳಗೆ ಅಂತಿಮ ನಿರ್ಣಯ ಆಗಲೇಬೇಕು ಎಂದು ಮರುದಿನ ಬೆಳಗ್ಗೆ 10ಕ್ಕೆ ಕಲಾಪ ಮುಂದೂಡಿದ ಸ್ಪೀಕರ್

## ರಾಜೀನಾಮೆಗೆ ಮುಂದಾದ ಸ್ಪೀಕರ್



ದೋಸ್ತಿಗಳ ಟೈಂ ಪಾಸ್ ಆಟಕ್ಕೆ ಬೇಸತ್ತ ಸ್ಪೀಕರ್ ರಮೇಶ್ ಕುಮಾರ್ ಎರಡು ಬಾರಿ ರಾಜೀನಾಮೆಗೆ ಮುಂದಾದರು. ವಿಶ್ವಾಸಮತ ಯಾಚನೆ ವಿಳಂಬವಾಗಿರುವುದರಿಂದ ತಮ್ಮ ಬಗ್ಗೆಯೇ ಸಾರ್ವಜನಿಕ ವಲಯದಲ್ಲಿ ತಪ್ಪು ಸಂದೇಶ ಹೋಗುವಂತಾಗಿದೆ. ಇನ್ನು ಇದನ್ನೆಲ್ಲ ನೋಡಿಕೊಂಡು ಇರಲು ಸಾಧ್ಯವಿಲ್ಲ, ಕೊಟ್ಟ ಮಾತಿನಂತೆ ಈ ದಿನ ಸಂಜೆಯೊಳಗೆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ರಾಜೀನಾಮೆ ಕೊಟ್ಟು ತೆರಳುವುದಾಗಿ ಬೆಳಗ್ಗೆ ಹೇಳಿದರು. ಬಳಿಕ ಸ್ಪೀಕರ್ ಅವರನ್ನು ಸಿದ್ದರಾಮಯ್ಯ ಸಮಾಧಾನ ಪಡಿಸಿದರು ಎಂದು ಗೊತ್ತಾಗಿದೆ. ಸಂಜೆ ಕಲಾಪ ಮುಂದೂಡಿಕೆಯಾದಾಗಲೂ ಸ್ಪೀಕರ್ ಕಚೇರಿಯಲ್ಲಿ ಹೈಡ್ರಾಮಾ ನಡೆಯಿತು. ವಿಶ್ವಾಸಮತ ಪ್ರಕ್ರಿಯೆ ಮುಂದೂಡಲು ದೋಸ್ತಿಗಳು ಸ್ಪೀಕರ್ ಅವರ ಮೇಲೆ ಒತ್ತಡ ತರುವ ವರಸೆ ಪ್ರದರ್ಶಿಸಿದರು. ಸಾಧ್ಯವೇ ಇಲ್ಲವೆಂದು ನಿರಾಕರಿಸಿದ ಸ್ಪೀಕರ್, ಮತ್ತೊಮ್ಮೆ ರಾಜೀನಾಮೆ ಪ್ರಸ್ತಾಪ ಮುಂದಿಟ್ಟರು. ಈ ಹಂತದಲ್ಲೂ ಸಿದ್ದರಾಮಯ್ಯ ಅವರೇ ಮನವೊಲಿಸಿದರು ಎನ್ನಲಾಗಿದೆ.

## ಇನ್ನೂ 2 ದಿನ ಸಮಯ ಕೇಳಿದ ಕುಮಾರಸ್ವಾಮಿ

ಭೋಜನದ ನಂತರ ಕಲಾಪ ಪ್ರಾರಂಭಗೊಂಡಾಗ ಸಿಎಂ ಕುಮಾರಸ್ವಾಮಿ ಕಲಾಪಕ್ಕೆ ಬಾರದೆ ಕೊಠಡಿಯಲ್ಲೇ ಉಳಿದರು. ಇದರ ಮಧ್ಯೆ ಇನ್ನೂ 2 ದಿನ ಕಾಲಾವಕಾಶ ನೀಡುವಂತೆ ಸ್ಪೀಕರ್ ಅವರಲ್ಲಿ ಕೇಳಿಕೊಂಡಾಗ ಅವರಿಬ್ಬರ ನಡುವೆ ಮಾತಿನ ಚಕಮಕಿ ನಡೆಯಿತು ಎನ್ನಲಾಗಿದೆ. ಸ್ಪೀಕರ್ ಕೊನೆಗೂ ಒಪ್ಪಲಿಲ್ಲ. ಸಂಜೆ 6.20ಕ್ಕೆ ಕಲಾಪ ಮುಂದೂಡಿ ಮತ್ತೆ ಸಮಾವೇಶಗೊಂಡಾಗ ಸಿಎಂ ಸುಮಾರು 20 ನಿಮಿಷ ಸದನದಲ್ಲಿ ಹಾಜರಿದ್ದರು. ಬಳಿಕ ಸದನದಿಂದ ನಿರ್ಗಮಿಸಿದ ಅವರು ಕಲಾಪ ಮುಂದೂಡಿಕೆಯಾಗುವವರೆಗೂ ಬರಲೇ ಇಲ್ಲ. ಸುಮಾರು 6 ಗಂಟೆ ಕಾಲ ಅವರು ಕಲಾಪದಿಂದ ಹೊರಗಿದ್ದರು.

### ಅನರ್ಹತೆ ವಿಚಾರಣೆ: ಇಂದು ಹಾಜರಾಗಲು 15 ಅತೃಪ್ತರಿಗೆ ಸ್ಪೀಕರ್ ನೋಟಿಸ್ >>02

ರಾಜೀನಾಮೆ ಇತ್ಯರ್ಥವಾಗದೆ ವಿಶ್ವಾಸಮತವಿಲ್ಲ: ...

1/2

# ಸಂಜೆ 6 ಗಂಟೆಗೆ ಹೊಸ ಡೆಡ್‌ಲೈನ್

ಮೊದಲ ಪುಟದಿಂದ

ಕ್ಷೇತ್ರ ಮಧ್ಯೆ ಮೊದಲ ಬಾರಿ ಆಯ್ಕೆಯಾದ ಕೆಲವು ಶಾಸಕರು ಕ್ಷೇತ್ರ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಿದರು. ಇದಕ್ಕೆ ಆಕ್ಷೇಪಿಸಿದ ಜೆಡಿಎಸ್‌ನ ಶಿವಲಿಂಗೇಗೌಡ, ಬಜೆಟ್ ಮೇಲಿನ ಬೇಡಿಕೆ ಸಂದರ್ಭದಲ್ಲಿ ಅಭಿವೃದ್ಧಿ ಬಗ್ಗೆ ಗಮನ ಸೆಳೆಯಬಹುದು. ಈಗ ವಿಶ್ವಾಸಮತದ ಮೇಲೆ ಮಾತನಾಡಬೇಕು. ಬಿಜೆಪಿಯಿಂದ ಪ್ರಜಾಪ್ರಭುತ್ವದ ಕಗ್ಗೊಲೆ ಹೇಗಾಗುತ್ತಿದೆ ಎನ್ನುವುದರ ಕುರಿತು [illegible] ಚರ್ಚೆ ನಡೆಯಬೇಕೆಂದು ಒತ್ತಡ ತಂದರು. ಇದೇ ವೇಳೆ ಆಡಳಿತಾರೂಢ ಕಾಂಗ್ರೆಸ್-ಜೆಡಿಎಸ್ ಶಾಸಕರಲ್ಲಿ ಹಲವರು ತಮಗೂ ಮಾತನಾಡಲು ಅವಕಾಶ ನೀಡುವಂತೆ ಎದ್ದು ನಿಂತು ಗಲಾಟೆ ಪ್ರಾರಂಭಿಸಿದರು. ಧರಣಿ ಮಾಡುವುದಕ್ಕೂ ಮುಂದಾದರು. ಆಸನದಲ್ಲಿ ಕುಳಿತುಕೊಳ್ಳುವಂತೆ ಸ್ಪೀಕರ್ ಎಷ್ಟು ಬಾರಿ ಸೂಚಿಸಿದರೂ ಕೇಳಿಸಿಕೊಳ್ಳಲು ಆಗ ಸ್ಪೀಕರ್ 10 ನಿಮಿಷ ಕಲಾಪ ಮುಂದೂಡಿದರು. ಕೇವಲ 10 ನಿಮಿಷ ಮುಂದೂಡಿಕೆಯೆಂದು ಒತ್ತಿ ಒತ್ತಿ ಹೇಳಿದ್ದರು. ಸ್ಪೀಕರ್ ಈ ನಿರ್ಧಾರ ಪ್ರಕಟಿಸಿದಾಗ ಸಂಜೆ 6.21 ಗಂಟೆಯಾಗಿತ್ತು. ಆದರೆ, ಪುನಃ ಕಲಾಪ ಆರಂಭವಾಗುವಾಗ ರಾತ್ರಿ 8 ಗಂಟೆ ದಾಟಿತ್ತು.

ಕಲಾಪ ಪುನರಾರಂಭಗೊಂಡಾಗಲೂ ದೋಸ್ತಿಗಳು ವಿಶ್ವಾಸಮತ ಯಾಚನೆಗೆ ಇನ್ನೂ ಸಮಯ ಬೇಕು. ಈ ಬಗ್ಗೆ ಇನ್ನಷ್ಟು ಚರ್ಚೆಯಾಗಬೇಕು ಎಂದು ಒತ್ತಡ ತಂತ್ರ ಮುಂದುವರಿಸಿದರು. ಪ್ರತಿಪಕ್ಷದ ನಾಯಕ ಯಡಿಯೂರಪ್ಪ, ತಡರಾತ್ರಿಯಾದರೂ ಆಗಬಹುದು. ಈ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ವಿನಂತಿಸಿಕೊಂಡರು. ಸ್ಪೀಕರ್ ಅವರೂ ತಾವು ಎಷ್ಟು ಹೊತ್ತಾದರೂ ಕಲಾಪ ನಡೆಸಲು ಸಿದ್ಧವೆಂದರು.